

ಶೃಂಗದಿಂದ ಕಾಣುವ ತ್ರಿಶೂಲ ಪರ್ವತ

ಕಡಿಮೆಯಾಗಿ ಶೂನ್ಯದ ಆಸುಪಾಸಿನಲ್ಲಿರುತ್ತದೆ. ನಾವಿದ್ದ ಜಾಗದಲ್ಲೆಲ್ಲಾ ಮಂಜು ಆವರಿಸಿದ್ದರೂ ಒಂದು ಭಾಗದಲ್ಲಿ ಬಿಸಿಲು ಬಿದ್ದು ಮಂಜೆಲ್ಲಾ ಕರಗಿಹೋಗಿ ಬಯಲಿನಂತಾಗಿತ್ತು. ನಾವು ನಮ್ಮ ಟೆಂಟ್‌ಗಳಿಗೆ ಈ ಜಾಗವೇ ಸೂಕ್ತವೆಂದು ತೀರ್ಮಾನಿಸಿ ಕ್ಯಾಂಪ್ ಫೈರ್‌ಗೆ ತಯಾರಾದೆವು.

ಗೈಡ್‌ಗೆ ಆ ಕಾಡಿನ ಪ್ರಾಣಿಗಳ ಬಗ್ಗೆ ವಿಚಾರಿಸಿದೆ. 'ಈ ಕಾಡಿನಲ್ಲಿ ಅಂತಹ ಪ್ರಾಣಿಗಳೇನೂ ಇಲ್ಲ, ಇದ್ದರೆ ಕರಡಿ ಮತ್ತು ಜಿಂಕೆ ಜಾತಿಯ ಪುಟ್ಟ ಪ್ರಾಣಿಗಳು ಇರಬಹುದು' ಎಂದಾಗ ಎದೆ ಧಸಕ್ಕೆಂದಿತು. ನಾವು ಹಾಕಿದ ಕ್ಯಾಂಪ್ ಫೈರ್‌ನಿಂದಾಗಿ ಯಾವ ಪ್ರಾಣಿಗಳೂ ಹತ್ತಿರ ಸುಳಿಯುವುದಿಲ್ಲ ಎಂದಾಗ ಮನಸ್ಸು ನಿರಾಳ. ಕಾಡಿನ ಕಡುಗತ್ತಲಲ್ಲಿ ಟೆಂಟ್‌ನೊಳಗೆ ಮಲಗುವುದೇ ಒಂದು ವಿಶಿಷ್ಟ ಅನುಭವ. ಆಧುನಿಕ 'ಸೌಲಭ್ಯ'ಗಳಾದ ಟಿವಿ, ಮೊಬೈಲ್, ಇಂಟರ್‌ನೆಟ್, ವಾಹನಗಳ ಗಲಾಟೆ ಇದ್ಯಾವುದೂ ಇಲ್ಲದ ಒಂದು ಪ್ರಶಾಂತ ಭಾವ. ಕಾಡಿನ ಆ ಮೌನ ಮನಸ್ಸನ್ನು ತುಂಬಾ ಹಗುರಾಗಿಸುತ್ತದೆ.

ಮುಂಜಾನೆ ಎದ್ದು ಕಾಡಿನೊಳಗೇ ಸಾಗಿದ ನಮ್ಮ ಚಾರಣ ಹೊರಟಿದ್ದು 'ಬುಗಿಯಾಲ್' ಎಂಬ ಹುಲ್ಲುಗಾವಲಿನ ಕಡೆಗೆ. ಅಲ್ಲಿಗೆ ತಲುಪಿ ಎತ್ತ ಕಣ್ಣು ಹಾಯಿಸಿದರೂ ಹುಲ್ಲುಗಾವಲೆಲ್ಲಾ ಬೆಳ್ಮಂಜಿನ ಅಡಿಯಲ್ಲಿ ಹೂತುಹೋಗಿದೆ! ಪ್ರಕೃತಿಯೇ ನಮ್ಮ ಬರುವಿಕೆಗಾಗಿ ಬಿಳಿಯ ಜಮಖಾನ ಹಾಸಿ ಸ್ವಾಗತ ಕೋರುತ್ತಿತ್ತು. ಮಂಜಿನ ಮೇಲೆ ಓಡಾಡುವುದು ಒಂದು ವಿಭಿನ್ನ ಅನುಭವ. ಮಂಜು ಹರಳು ಹರಳಾಗಿ ಉಪ್ಪಿನ ರಾಶಿಯಂತಿತ್ತು. ಕಾಲಿಟ್ಟ ತಕ್ಷಣ 'ಕರ್ ಕರ್' ಎಂದು ಶಬ್ದ ಮಾಡುತ್ತಾ ನಮ್ಮ ಕಾಲುಗಳು ಕೆಲವೊಮ್ಮೆ ಮೊಣಕಾಲಿನವರೆಗೂ ಹೂತು ಹೋಗುತ್ತಿದ್ದವು. ಜನಜಂಗುಳಿಯಿಲ್ಲದ ಪ್ರದೇಶವಾದ್ದರಿಂದ ಎಲ್ಲರೂ ನಡೆದೂ ನಡೆದೂ ಗಟ್ಟಿಯಾಗದೇ ಹರಳಿನ ರೂಪದಲ್ಲಿಯೇ ಉಳಿದುಕೊಂಡಿದ್ದ ಮಂಜು ನಮಗೆ ಎಲ್ಲಿಯೂ ಜಾರಿದ ಅನುಭವವನ್ನು ನೀಡಲಿಲ್ಲ.

ಅಲ್ಲಿಯೇ ಕೊಂಚಹೊತ್ತು ಆಟವಾಡಿ ಮುಂದಡಿಯಿಟ್ಟ ನಮಗೆ ಗೋಚರಿಸಿದ್ದು ನಯನ ಮನೋಹರವಾದ ದೃಶ್ಯ. ಈಶಾನ್ಯ ದಿಕ್ಕಿಗೆ ಹಿಮಾಲಯದ ತ್ರಿಶೂಲ್, ಹಿಮಾಲ್ ಮತ್ತು ನಂದಾಗುಂಟಿ ಪರ್ವತಗಳು ಬೃಹತ್ತಾಗಿ ವಿಜೃಂಭಿಸುತ್ತಿದ್ದವು. ಆ ದೃಶ್ಯವೈಭವ ಪದಗಳಿಗೆ ನಿಲುಕದ್ದು, ಅನುಭವಕ್ಕಷ್ಟೇ ಸೀಮಿತ. ಈ ಅನನ್ಯ ದೃಶ್ಯವನ್ನು ಕಣ್ತುಂಬಿಕೊಳ್ಳುತ್ತಾ ಮುಂದೆ ಸಾಗಿದ ನಾವು ಬಂದು ತಲುಪಿದ್ದು ಬ್ರಹ್ಮತಾಲ್ ಸರೋವರಕ್ಕೆ. ಪುರಾಣದ ಪ್ರಕಾರ ಬ್ರಹ್ಮ ಇಲ್ಲಿಯೇ ಕುಳಿತು ತಪಸ್ಸು ಮಾಡಿದ್ದನಂತೆ. ಪುಟ್ಟದೊಂದು ಬ್ರಹ್ಮನ ದೇವಾಲಯವೂ ಅಲ್ಲಿದೆ.

ಈ ಸರೋವರ ಸಮುದ್ರಮಟ್ಟದಿಂದ ಸುಮಾರು 11200 ಅಡಿ ಎತ್ತರದಲ್ಲಿದೆ. ಸರೋವರದ ದಡದಲ್ಲಿನ ಒಂಟಿಮರ, ಅಲ್ಲೆಲ್ಲ ಹತ್ತಿಯ ಮುದ್ದೆಯನ್ನು ಅಂಟಿಸಿದಂತೆ ಬಿದ್ದಿರುವ ಮಂಜು, ಅಲ್ಲಿಯ ಪ್ರಶಾಂತ ವಾತಾವರಣ ಹಾಗೂ ನೀರಿನಲ್ಲಿ ಇದೆಲ್ಲದರ ಪ್ರತಿಫಲನ ಅಲ್ಲಿಯ ಸೌಂದರ್ಯವನ್ನು ಇಮ್ಮಡಿಗೊಳಿಸಿತ್ತು.

ಸರೋವರದ ದಂಡೆಯಲ್ಲಿಯೇ ಒಂದು ಸಮತಟ್ಟಾದ ಜಾಗವನ್ನು ಹುಡುಕಿ ನಮ್ಮ ಟೆಂಟ್‌ಗಳನ್ನು ಸ್ಥಾಪಿಸಿದೆವು. ಚಳಿಗಾಲದಲ್ಲಿ ಇಲ್ಲಿನ ತಾಪಮಾನ ಮೈನಸ್‌10ರವರೆಗೂ ಹೋಗುತ್ತದೆ. ಹಾಗಾಗಿ ಇಲ್ಲಿ ಮರಗಿಡಗಳೂ, ಪ್ರಾಣಿಪಕ್ಷಿಗಳೂ ತುಂಬಾ ವಿರಳ. ನಮಗೆ ಕಾಣಸಿಗುವುದು ಆಗಸದಲ್ಲಿ ಹಾರಾಡುವ ಬೃಹತ್ ರಣಹದ್ದುಗಳು ಹಾಗೂ ಆಗೊಮ್ಮೆ ಈಗೊಮ್ಮೆ ಗೋಚರಿಸುವ ಕಾಗೆಗಳು ಮಾತ್ರ.

ಬೆಳಿಗ್ಗೆ ಎದ್ದು ನಾವು ಹೊರಟಿದ್ದು **summit** ಅಥವಾ ಶೃಂಗದ ಕಡೆಗೆ. ಕೊಂಚ ಬೇಗನೆ ತಯಾರಾಗಿ ಹೊರಟೆವು, ತಡವಾದರೆ ಸುತ್ತಲಿನ ಪರ್ವತ ಶಿಖರಗಳಲ್ಲೆಲ್ಲಾ ಮೋಡ ಮುಸುಕಲು ಪ್ರಾರಂಭವಾಗಿ ಅದ್ಭುತವಾದ ದೃಶ್ಯದಿಂದ ವಂಚಿತವಾಗಬಹುದಾದ ಅಪಾಯವಿತ್ತು. ಈ ದಿನದ ಚಾರಣ ಇತರೆ ಎಲ್ಲಾ ದಿನಗಳಿಗಿಂತ ಕಠಿಣವಾಗಿತ್ತು, ಏಕೆಂದರೆ ದಾರಿಯೂ ಅಷ್ಟೇ ಕಡಿದಾಗಿತ್ತು. ಶೃಂಗವನ್ನು ತಲುಪಿದ ನಂತರ ಅಲ್ಲಿನ ದೃಶ್ಯವೈಭವ ಚಾರಣದ ಕಾಠಿಣ್ಯತೆಯನ್ನು ನಿವಾಳಿಸಿ ಬಿಸಾಕುವಷ್ಟು ಮನಮೋಹಕವಾಗಿತ್ತು.

ಈ ಪರ್ವತಶೃಂಗದ ಹೆಸರು ಜತ್ರೋಪಾನಿ. ನಾವು ಇಲ್ಲಿ ನಿಂತು ಸುತ್ತಲೂ ಅನೇಕ ಪರ್ವತ ಶಿಖರಗಳನ್ನು ಕಾಣಬಹುದು. ಅದರಲ್ಲಿ ಪ್ರಮುಖವಾದವು ಪಶ್ಚಿಮದಲ್ಲಿರುವ ನೀಲಕಂಠ ಮತ್ತು ಚೌಕಂಭ ಪರ್ವತಗಳು, ವಾಯುವ್ಯ ದಿಕ್ಕಿನಲ್ಲಿರುವ ನಂದಾಗುಂಟಿ, ಬೇಥರ್ ತೋಲಿ ಮತ್ತು ಹಿಮಾಲ್. ಉತ್ತರದಲ್ಲಿರುವ ಕಾಮೇತ್ ಮತ್ತು ಮುಕುಟ್ ಹಾಗೂ ಪೂರ್ವಕ್ಕೆ ತ್ರಿಶೂಲ್. ಒಂದೆರಡು ಗಂಟೆಗಳನ್ನು ಇಲ್ಲಿಯೇ ಕಳೆದು ಪುನಃ ಬ್ರಹ್ಮತಾಲ್ ಸರೋವರದ ದಂಡೆಯಲ್ಲಿದ್ದ ನಮ್ಮ ಟೆಂಟ್‌ಗಳಿಗೆ ಹಿಂತಿರುಗಿದೆವು. ಇದು

